permanent lien in the department. ಟೆಂಪರರಿ ಅಪಾಯಿಂಟ್‌ಮೆಂಟ್‌ಗಳನ್ನು ಡೆಪ್ಯುಟೇಷನ್ ಮೇಲೆ ಇನ್ನೊಂದು ಇಲಾಖೆಗೆ ಕಳಿಸುವುದಕ್ಕಾಗುವುದಿಲ್ಲ Whenever we say anything, it means that it is subject to the rules in force. ಇದನ್ನು ನಾವು ಮನಗಾಣಬೇಕು. ಒಟ್ಟಿನಲ್ಲಿ ಅವರೆಲ್ಲರಿಗೂ ಕೆಲಸ ಮೊರಕಬೇಕು, ಹಿಂದಿನ ಸರ್ವಿಸ್ ಪ್ರಕಾರ ಗ್ರ್ಯಾಚುಯಿಟಿ ಕೊಡಬೇಕೆಂದು ಏನು ಕೇಳಿದ್ದಾರೆ ಅದೆಲ್ಲವನ್ನೂ ಕೊಡಿಸುತ್ತೇವೆ. ಈ ಸಭೆಯಲ್ಲಿ ವಾಗ್ದಾನಮಾಡಿದ್ದನ್ನು ಆಕ್ಷಃ ರಶಃ ಪಾಲಿಸಿ ಕೊಡುತ್ತೇವೆ. ಆದರೆ ಅವರು ಕೋರ್ಟಿಗೆ ಹೋಗಿ ಏನು ರಿಟ್ ಪಿಟಿಷನ್ ಹಾಕಿದ್ದಾರೆ, ಅಥವಾ ಸಿವಿಲ್ ಸೂಟ್ ಹಾಕಿದ್ದಾರೆ, ಅವೆಲ್ಲವನ್ನೂ ವಾಪಸ್ ತೆಗೆದುಕೊಳ್ಳಬೇಕು. ಆ ರೀತಿ ವಾಪಸ್ ತೆಗೆದುಕೊಂಡರೆ ನಾಳೆಯೇ ಎಲ್ಲವನ್ನೂ ಸರಿಪಡಿಸಿಕೊಡುತ್ತೇವೆ.

ಶ್ರೀ ಕಾಗೋಡು ತಿಮ್ಮಪ್ಪ.—ಎಚ್.ಇ.ಸಿ.ಪಿ.ಯಲ್ಲಿ ಹಂಗಾಮಿ ನೌಕರರು ಎನಿದ್ದರು, ಅವರ ಪೈಕಿ ಎಲಕ್ಟ್ರಿಕಲ್ ವಿಭಾಗಕ್ಕೆ ಸೇರಿದವರು ಮತ್ತು ಸಿವಿಲ್ ವಿಭಾಗಕ್ಕೆ ಸೇರಿದವರು ಇದ್ದರು. ಈ ಸಿವಿಲ್ ವಿಭಾಗಕ್ಕೆ ಸೇರಿದ್ದ ನೌಕರರನ್ನು ರೆಗ್ಯುಲರೈಜ್ ಮಾಡಿ ಈಗಾಗಲೇ ಪರ್ಮನೆಂಟ್ ಲೀನ್ ಕೋರಿಸಲಾಗಿದೆ.

SRI H. M. CHANNABASAPPA.—whoever holds a permanent appoint ment in H E. C. P, will be treated as on deputation and those who do not hold a permanent appointment cannot be so treated.

I will examine it and while examining it, I will always have a soft corner for them. This is all what I can say now.

ಶ್ರೀ ಕಾಗೋಡು ತಿಮ್ಮಪ್ಪ.— ಈ ೨೦೩ ಜನರ ಪೈಕಿ ಕೂಡ ರೆಗ್ಯುಲರೈಜ್ ಆದವರು ಮತ್ತು ಪರ್ಮನೆಂಟ್ ಆದವರು ಇದ್ದಾರೆ.

ಶ್ರೀ ಎಚ್. ಎಂ. ಚೆನ್ನಬಸಪ್ಪ.—ರೆಗ್ಯುಲರೈಜ್ ಮತ್ತು ಪರ್ಮನೆಂಟ್ ಈ ಎರಡಕ್ಕೂ ವ್ಯತ್ಯಾಸವಿದೆ.

NON OFFICIAL RESOLUTION

(*i*) *Steps to Arest the Spiraling of price of Essential commodoities*

(*ii*) *re visiglene on the anti Social Elements in food arietculs and to arrested price of such commodities.*

† ಶ್ರೀ ಎನ್. ಚಿಕ್ಕೇಗೌಡ (ಪಶುಪಾಲನೆ ರಾಜ್ಯ ಸಚಿವರು).— ಮಾನ್ಯ ಅಧ್ಯಕ್ಷರೇ, ಈ ಬೆಲೆಗಳ ಏರಿಕೆ ಬಗ್ಗೆ ಮತ್ತು ಕಲಬೆರಕೆ ಬಗ್ಗೆ ಮಾನ್ಯ ಸದಸ್ಯರು ಅನೇಕ ವಿಚಾರಗಳನ್ನು ಈ ಸಭೆಯಲ್ಲಿ ಹೇಳಿದ್ದಾರೆ. ಬೆಲೆಗಳು ಎಷ್ಟರಮಟ್ಟಿಗೆ ಹೆಚ್ಚಿದೆ ಎಂಬ ಬಗ್ಗೆ ಅಂಕಿಅಂಶಗಳನ್ನು ಶ್ರೀಮಾನ್ ಕೃಷ್ಣನ್ ಅವರು ಮತ್ತು ಇನ್ನಿತರ ಕೆಲವು ಸದಸ್ಯರು ಕೊಟ್ಟಿದ್ದು, ಆಗತ್ಯ ವಸ್ತುಗಳ ಉತ್ಪಾದನೆ ಹಾಗೂ ಉತ್ಪಾದನೆಗೆ ಸಂಬಂಧಪಟ್ಟ ಎಲ್ಲ ವಿಚಾರಗಳಲ್ಲಿಯೂ ರಾಷ್ಟ್ರೀಕರಣ ಮಾಡಬೇಕೆಂದು ಸಲಹೆಗಳನ್ನು ಕೊಟ್ಟಿದ್ದಾರೆ. ಇವುತ್ತು ದೇಶದಲ್ಲಿ ಆಹಾರದ ಉತ್ಪಾದನೆ ಹೆಚ್ಚಾಗಿದ್ದರೂ ಅವುಗಳ ಬೆಲೆ ಗಗನಕ್ಕೆ ಏರುತ್ತಿದೆ ಎನ್ನುವ ಮಾತನ್ನು ಮಾನ್ಯ ಸದಸ್ಯರು ಹೇಳಿದ್ದಾರೆ. ಇವುತ್ತು ಇಡೀ ರಾಷ್ಟ್ರದಲ್ಲಿಯೇ ಆಹಾರಧಾನ್ಯಗಳ ಬೆಲೆಗಳು ಏರುತ್ತಿವೆ. ಇದು ರಾಜ್ಯಕ್ಕೂ ಅನ್ವಯವಾಗಿದೆ ಎಂದು ನಾನು ಸ್ಪಷ್ಟವಾಗಿ ಹೇಳುತ್ತೇನೆ. ಇವುತ್ತು ರಾಷ್ಟ್ರದಲ್ಲಿ ಅನೇಕ ಸಮಸ್ಯೆಗಳು ನಮ್ಮ ಮುಂದೆ ಇವೆ. ಇದರಲ್ಲಿ ಬಹಳ ಮುಖ್ಯವಾದ ವಿಚಾರವೇನೆಂದರೆ ಇವುತ್ತು ರಾಷ್ಟ್ರದಲ್ಲಿ ಅನೇಕ ಕಡೆ ಮಳೆ ಆಗದೆ ಅಭಾವ ಪರಿಸ್ಥಿತಿ ಬಂದಿದೆ. ಆಹಾರದ ಉತ್ಪಾದನೆ ಜಿದುಂ ಹೋಗಿರುವುದು ಈ ಬೆಲೆಗಳು ಏರುವುದಕ್ಕೆ ಒಂದು ಮುಖ್ಯ ಕಾರಣ. ಎರಡನೆಯ ಕಾರಣ ಈಗ ನಮ್ಮ ದೇಶದಲ್ಲಿ ಕೆಲವು ಕಡೆ ಅಭಾವ ಪರಿಸ್ಥಿತಿ ಉಂಟಾಗಿರುವುದು ಈ ಸಂದರ್ಭವನ್ನು ಕೆಲವು ಸಮಾಜ ಘಾತುಕರು ಉಪಯೋಗಿಸಿಕೊಂಡು ಹೆಚ್ಚು ಆಹಾರ ಧಾನ್ಯವನ್ನು ಶೇಖರಣೆ ಮಾಡಿಕೊಂಡು ದುರ್ಲಾಭವನ್ನು ಪಡೆಯುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ ಇದರ ಬಗ್ಗೆ ಸರ್ಕಾರದವರು ಈಗಾಗಲೇ ಕ್ರಮವನ್ನು ತೆಗೆದುಕೊಂಡಿದ್ದಾರೆ. ಈಗ್ಗೆ ಕೆಲವು ದಿವಸಗಳ ಹಿಂದೆ ನಮ್ಮ ರಾಜ್ಯದಲ್ಲಿ ಅನೇಕ ಕಡೆ ನಮ್ಮ ಅಧಿಕಾರಿಗಳು ಹೆಚ್ಚು ಆಹಾರಧಾನ್ಯವನ್ನು ಶೇಖರಣೆ ಮಾಡಿರತಕ್ಕ ಅಂಗಡಿಗಳನ್ನು ರೈಡ್‌ಮಾಡಿ ಹಿಡಿದಿರತಕ್ಕ ವಿಷಯ ಮಾನ್ಯ ಸದಸ್ಯರೆಲ್ಲರಿಗೂ ಗೊತ್ತಿದೆ. ಮುಖ್ಯವಾಗಿ ಹೇಳುವುದಾದರೆ ಈ ಬೆಲೆಗಳ ಏರಿಕೆಯಂ

(ಶ್ರೀ ಎನ್. ಚಿಕ್ಕೇಗೌಡ)

ವಿಷಯ ರಾಷ್ಟ್ರೀಯ ಪ್ರಶ್ನೆಯಾಗಿದೆ. ಇದು ಬರೀ ರಾಜ್ಯಕ್ಕೇ ಅನ್ವಯಿಸುವುದಿಲ್ಲ. ಸಕ್ಕರೆ ಬೆಲೆ ಏರಿಕೆಯ ಬಗ್ಗೆ ಕೆಲವು ಮಾನ್ಯ ಸದಸ್ಯರು ಮಾತನಾಡಿದ್ದಾರೆ ಈಗ ಲೆವಿ ಸಕ್ಕರೆಯನ್ನು ಫೇರಾಪ್ರೈಜ್ ಡಿಪೋಗಳ ಮೂಲಕ ರೇಷನ್ ಕಾರ್ಡುಗಳ ಆಧಾರದ ಮೇಲೆ ಜನಗಳಿಗೆ ಹಂಚಿಕೆ ಮಾಡಲಾಗುತ್ತಿದೆ ಓಪನ್ ಮಾರ್ಕೆಟ್ಟಿನಲ್ಲಿ ಹೆಚ್ಚು ಬೆಲ್ಲೆ ಇದೆ. ಉತ್ಪಾದಕರಿಗೆ ಹೆಚ್ಚು ಬೆಲೆ ಸಿಕ್ಕಲಿ ಎನ್ನುವ ದೃಷ್ಟಿಯಿಂದ ಕೇಂದ್ರ ಸರ್ಕಾರದವರು ಇದನ್ನು ಗೊತ್ತು ಮಾಡಿದ್ದಾರೆ. ನಮ್ಮದೇಶದಲ್ಲಿ ಆಹಾರ ಉತ್ಪಾನೆಯು ಎಷ್ಟೆಷ್ಟು ಉತ್ಪಾದನೆ ಆಗಿದೆ ಎನ್ನುವ ರೆಕಾರ್ಡ್ ಇಟ್ಟಿದ್ದೀರಾ ಎಂದು ಮಾನ್ಯ ಸದಸ್ಯರಾದ ಕೃಷ್ಣನ್ ಅವರು ಕೇಳಿದರು. ಆ ಅಂಕಿ ಅಂಶಗಳನ್ನು ನಾನು ಈಗ ಈ ಸಭೆಯ ಗಮನಕ್ಕೆ ತರಬಯಸುತ್ತೇನೆ. ನಮ್ಮಲ್ಲಿ ಅಕ್ಕಿ ಉತ್ಪಾದನೆ ೧೯೬೬-೬೫ರಲ್ಲಿ ೩೭೭.೧೨ ಲಕ್ಷ ಟನ್ ಉತ್ಪಾದನೆಯಾಯಿತು. ೧೯೬೫-೬೯ರಲ್ಲಿ ೩೯.೬೭ ಟನ್ ಉತ್ಪಾದ ಯಾಯಿತು. ೧೯೬೯-೭೦ನೇ ಸಾಲಿನಲ್ಲಿ ೪೦೪.೨೯ ಲಕ್ಷ ಟನ್ ಉತ್ಪಾದನೆಯಾಯಿತು. ೧೯೭೦-೭೧ನೇ ಸಾಲಿನಲ್ಲಿ ೪೨೨.೩೫ ಲಕ್ಷ ಟನ್ ಉತ್ಪಾದನೆಯಾಯಿ ೧೯೭೧-೭೨ನೇ ಸಾಲಿನಲ್ಲಿ ೪೨೭.೩೫ ಲಕ್ಷ ಟನ್ ಉತ್ಪಾದನೆ ಆಯಿತು ಜಪಾನ್, ೭೦-೭೧ನೇ ಸಾಲಿನಲ್ಲಿ ೨೩೬-೧೯ ಲಕ್ಷ ಟನ್ ಉತ್ಪಾದನೆಯಾಯಿತು. ೭೨-೭೩ರಲ್ಲಿ ೧೯೧.೩೬ ಲಕ್ಷ ಟನ್ ಉತ್ಪಾದನೆಯಾಯಿತು.

ಕೇಂದ್ರ ಸರ್ಕಾರದವರು ಮತ್ತು ರಾಜ್ಯಸರ್ಕಾರದವರು ಮತ್ತು ರಾಜ್ಯಸರ್ಕಾರದವರು ಬತ್ತ ಮತ್ತು ಗೋಧಿಯ ಹೋಲ್ ಸೇಲ್ ಟ್ರೇಡನ್ನು ತೆಗೆದುಕೊಳ್ಳಬೇಕೆಂದು ತೀರ್ಮಾನ ಮಾಡಿದ್ದಾರೆ. ಇದರ ಬಗ್ಗೆ ಎಲ್ಲಾ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುತ್ತಿದ್ದೇವೆ. ಬೆಲೆಗಳನ್ನು ತಡೆಗಟ್ಟುವುದಕ್ಕೆ ಜಾಪಚಾರಿಕ ಪಡಿತರ ವ್ಯವಸ್ಥೆ ಇಲ್ಲದೇ ಇರುವ ಕಡೆಗಳಲ್ಲಿಯೂ ಕೂಡ ಫೇರ್‌ಪ್ರೈಜ್ ಡಿಪೋಗಳನ್ನು ತೆರೆದು ನ್ಯಾಯ ಬೆಲೆಗೆ ಆಹಾರ ಧಾನ್ಯವನ್ನು ಪೂರೈಕೆ ಮಾಡುತ್ತಿದ್ದೇವೆ. ಮಾನ್ಯ ಸದಸ್ಯರು ಅನೇಕ ಸಲಹೆಗಳನ್ನು ಕೊಟ್ಟಿದ್ದಾರೆ. ಇದರಲ್ಲಿ ವ್ಯಕ್ತಿಯಾಗಿ ಆಹಾರ ಧಾನ್ಯಗಳ ವಿತರಣೆಯನ್ನು ಸಹಕಾರ ಸಂಘಗಳ ಮುಖಾಂತರ ಮತ್ತು ನ್ಯಾಯ ಬೆಲೆಯ ಅಂಗಡಿಗಳ ಮುಖಾಂತರ ಜನಗಳಿಗೆ ವಿತರಣೆ ಮಾಡಿದರೆ ಅನುಕೂಲವಾಗುತ್ತದೆ ಎಂದು ಹೇಳಿದ್ದಾರೆ. ಅವುಗಳನ್ನು ತೀವ್ರವಾಗಿ ನಾವು ಪರಿಶೀಲನೆ ಮಾಡುತ್ತೇವೆ. ಬೆಂಗಳೂರಿನಲ್ಲಿ ಇರತಕ್ಕ ಸಮಸ್ಯೆಗಳನ್ನು ಈ ಸದನದಲ್ಲಿ ಪ್ರಶ್ನೋತ್ತರ ಕಾಲದಲ್ಲಿ ಮಂತ್ರಿ ಕಾಲ್ ಅಟೆನ್‌ಷನ್ ನೋಟೀಸ್ ಬಂದಾಗ ತಿಳಿಸಿದ್ದೇವೆ. ಮುಖ್ಯವಾಗಿ ಈ ಆಹಾರ ಧಾನ್ಯಗಳ ಬೆಲೆಯನ್ನು ಏರಿಕೆಯನ್ನು ತಡೆಗಟ್ಟಬೇಕಾದರೆ ಈ ವಿಷಯದಲ್ಲಿ ನಮಗೆ ಎಲ್ಲರ ಸಹಕಾರವು ಬೇಕಾಗಿದೆ. ಆದ್ದರಿಂದ ತಾವುಗಳೆಲ್ಲರೂ ಈ ಬಗ್ಗೆ ನಮಗೆ ಸಹಕಾರವನ್ನು ಕೊಡಬೇಕೆಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಬೆಂಗಳೂರು ನಗರದಲ್ಲಿ ಆಹಾರವನ್ನು ವಿತರಣೆ ಮಾಡುವ ಬಗ್ಗೆ ಇರತಕ್ಕ ಕೆಲವು ನ್ಯೂನತೆಗಳನ್ನು ಮಾನ್ಯ ಸದಸ್ಯರು ಹೇಳಿದ್ದಾರೆ. ಇದರ ಜೊತೆಗೆ ಮಾನ್ಯ ಸದಸ್ಯರುಗಳಾದ ಶ್ರೀರಾಮುಲು ಅವರು ಮತ್ತು ಎಂ.ಎಸ್. ಕೃಷ್ಣನ್ ಅವರು ಅನೇಕ ವಿಚಾರಗಳನ್ನು ಹೇಳಿದ್ದಾರೆ. ಈ ಎಲ್ಲಾ ವಿಚಾರಗಳನ್ನೂ ನಾವು ತೀವ್ರವಾಗಿ ಪರಿಶೀಲನೆ ಮಾಡುತ್ತೇವೆ ದಿನಬಳಕೆ ಆಹಾರ ಧಾನ್ಯಗಳ ಬೆಲೆ ಏರಿಕೆಯನ್ನು ತಡೆಗಟ್ಟಲು ಸರ್ಕಾರ ಸೂಕ್ತ ಕ್ರಮವನ್ನು ಕೈಗೊಂಡು ಅಕ್ರಮ ಸಂಗ್ರಹಗಾರ ಮೇಲೆ ಧಾಳಿಯನ್ನು ಆರಂಭಿಸಿದೆ. ಮತ್ತು ನ್ಯಾಯಬೆಲೆಯ ಅಂಗಡಿಗಳಲ್ಲಿ ನಡೆಯಂತ ಬೋಗಸ್ ಕಾರ್ಡುಗಳ ವ್ಯವಹಾರದ ಮೇಲೆ ಕಣ್ಣು ಇಡಲಾಗಿದೆ. ಫೇರ್‌ಪ್ರೈಜ್ ಪದಾರ್ಥಗಳನ್ನು ತೆರೆದು ಅವುಗಳ ನಿರ್ವಹಣೆಯನ್ನು ನಿರುದ್ಯೋಗಿ ವಿದ್ಯಾವಂತರಿಗೆ ವಹಿಸಿ ಇದರ ಮುಖಾಂತರ ಜನಗಳಿಗೆ ಆಹಾರವನ್ನು ವಿತರಣೆ ಮಾಡಬೇಕೆಂದು ಆಲೋಚನೆ ಮಾಡಿದ್ದೇವೆ. ಸುಗ್ಗಿಯ ಕಾಲದಲ್ಲಿ ಓಪನ್ ಮಾರ್ಕೆಟ್‌ನಲ್ಲಿ ಬತ್ತವನ್ನು ಕೊಂಡು ರೈಸ್ ಮಿಲ್‌ಗಳಲ್ಲಿ ಅದನ್ನು ಸ್ಟಾಕ್‌ಮಾಡಿ ಅದನ್ನು ಅಭಾವ ಕಾಲದಲ್ಲಿ ವಿತರಣೆ ಮಾಡಬೇಕು ಎಂದು ಒಂದು ನೀತಿಯನ್ನು ಹಾಕಿಕೊಂಡಿದ್ದೇವೆ. ಜೋಳ ಏನಿದೆ ಇದು ಮುಖ್ಯವಾಗಿ ಉತ್ತರ ಕರ್ನಾಟಕದಲ್ಲಿ ಬೆಳೆಯುತ್ತದೆ. ಈಗ ಅಭಾವ ಇರುವುದರಿಂದ ಅದನ್ನು ಬೆಳೆಯುವುದಕ್ಕೆ ಸಾಧ್ಯವಾಗಿಲ್ಲ. ಆದ್ದರಿಂದ ಅದನ್ನು ಪ್ರೊಕ್ಯೂರ್ ಮಾಡುವುದಕ್ಕೆ ಸಾಧ್ಯವಾಗಿಲ್ಲ. ಬತ್ತವನ್ನು ಸಹಕಾರ ಸಂಘಗಳಲ್ಲಿ ಮತ್ತು ರೈಸ್‌ಮಿಲ್‌ಗಳಲ್ಲಿ ಇಟ್ಟು ಅದನ್ನು ವಿತರಣೆ ಮಾಡಬೇಕು ಸರ್ಕಾರದವರು ಕಾರ್ಯಕ್ರಮವನ್ನು ಹಾಕಿಕೊಂಡಿದ್ದಾರೆ.

10-30 A. M.

ಆ ಮೇಲೆ ಕಲಬೆರಕೆಯ ಬಗ್ಗೆ ಮತ್ತು ಎಸೆನ್ಷಿಯಲ್ ಫುಡ್ ಆಡಲ್ಟ್ರೇಶನ್ ಆಕ್ಟ್‌ನಂತೆ ನಾವು ಅನೇಕ ಕಟ್ಟಿಗಳನ್ನು ಹಾಕಿದ್ದೇವೆ. ಅವುಗಳು ಈ ರೀತಿ ಇವೆ :—

೧೯೭೧-೭೨ನೇ ಜೂನ್ ವರೆಗೆ ಹಾಕಿದ ಕೇಸುಗಳು ಈ ರೀತಿ ಇವೆ :—

No. of samples examined in 1971.	...	6,333
No. of cases found adulterated	...	1,346
No. of prosecutions	...	1,127
No. of convictions	...	960
No. of acquitted	...	47
No. of cases pending in the court	...	532
No. of cases of imprisonment	...	59
No. of cases upto sixmonths in 1972.		
No. of samples examined	...	1,632
No. of cases found adultereated	...	439
No. of cases filed	...	483
No. of convictions	...	11
No. of acquittal	...	22
No. of cases pending in courts	...	328

ಸರ್ಕಾರದವರು ಇಂತಹ ಅಕ್ರಮ ವ್ಯವಹಾರಗಳ ಬಗ್ಗೆ ಸಾಕಷ್ಟು ಕ್ರಮಗಳನ್ನು ತೆಗೆದುಕೊಳ್ಳುತ್ತಾರೆ ಎಂಬುದಕ್ಕೋಸ್ಕರ ಈ ಅಂಕಿ ಅಂಶಗಳನ್ನು ಸಭೆಗೆ ಕೊಡುತ್ತಿದ್ದೇನೆ. ಆದೇ ರೀತಿಯಲ್ಲಿ ನಾವು ಕೊಟ್ಟ ಆದೇಶದ ಮೇರೆಗೆ ಅನೇಕ ಹೋರ್ಡರ್ಸ್ ಎನಿದ್ದಾರೆ, ಅವರ ಅಂಗಡಿಗಳಿಗೆ ಧಾಳಿ ಮಾಡಿ ಅವರಲ್ಲಿ ಇರ ತಕ್ಕಂತಹ ಆಹಾರ ಸಾಮಗ್ರಿಗಳನ್ನು ವಶಪಡಿಸಿಕೊಂಡಿದ್ದಾರೆ. ಅದು ಪತ್ರಿಕೆಗಳಲ್ಲಿ ಸಹ ಬಂದಿದೆ. ಇದು ನಮ್ಮ ರಾಜ್ಯಕ್ಕೆ ಮಾತ್ರವಲ್ಲ, ಇಡೀ ದೇಶಕ್ಕೆ ಸಂಬಂಧಪಟ್ಟ ಪ್ರಶ್ನೆಯಾಗಿದೆ. ಇವತ್ತು ಇಂತಹ ಎಸೆನ್ ಶಿಯಲ್ ಕಮೊಡಿಟೀಸ್ ಬಗ್ಗೆ ಉಗ್ರ ಕ್ರಮಗಳನ್ನು ತೆಗೆದುಕೊಳ್ಳಲು ಸರ್ಕಾರಕ್ಕೆ ಸಾರ್ವಜನಿಕರ ಮತ್ತು ತಮ್ಮೆಲ್ಲರ ಸಹಕಾರವೂ ಬೇಕಾಗುತ್ತದೆ. ಇದರ ಬಗ್ಗೆ ಸರ್ಕಾರವು ಸಾಧ್ಯವಾದ ಎಲ್ಲ ಕ್ರಮಗಳನ್ನೂ ತೆಗೆದುಕೊಂಡು ಏರುವ ಬೆಲೆಗಳನ್ನು ತಡೆಗಟ್ಟುತ್ತದೆ ಮತ್ತು ದೇಶದಲ್ಲಿ ಹೋಲ್‌ಸೇಲ್ ಭತ್ತ ಮತ್ತು ಗೋಧಿಯ ಬಗ್ಗೆ ಕೇಂದ್ರಸರ್ಕಾರದ ಆದೇಶದ ಮೇರೆಗೆ ಕ್ರಮ ಕೈಗೊಳ್ಳುತ್ತೇವೆ. ಅದೂ ಅಲ್ಲದೆ ಇವತ್ತು ಉತ್ಪಾದಕರಿಗೆ ಸರಿಯಾದ ಬೆಲೆ ಕೊಡಬೇಕಾಗುತ್ತದೆ ಮತ್ತು ಗ್ರಾಹಕರಿಗೂ ಸರಿಯಾದ ಬೆಲೆಯಲ್ಲಿ ಸಿಗುವಂತೆ ಮಾಡಬೇಕಾಗುತ್ತದೆ. ಇವರ ಮಧ್ಯೆ ಇರುವಂತಹ ಮಧ್ಯವರ್ತಿಗಳ ಶೋಷಣೆಯನ್ನು ತಪ್ಪಿಸುವುದಕ್ಕೆ ಸರ್ಕಾರವು ಸೂಕ್ತ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಏರ್ಪಾಡು ಮಾಡುವುದರಿಂದ ಈ ಎರಡೂ ನಿರ್ಣಯಗಳನ್ನು ವಾಪಸ್ಸು ತೆಗೆದುಕೊಳ್ಳಬೇಕು ಮತ್ತು ಇದರ ಬಗ್ಗೆ ಒತ್ತಾಯಮಾಡಕೂಡದು ಎಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಟಿ. ಆರ್. ಶಾಮಣ್ಣ (ಕೋಟೆ) :—ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಯವರು ಜನರಿಗೆ ಯಾವ ವಿಧವಾದಂತಹ ಅನುಕೂಲವನ್ನು ಮಾಡುತ್ತೇವೆಂದು ಹೇಳಿದರೂವುದು ಶೋಚನೀಯವಾದ ವಿಚಾರ. ಅದಲ್ಲದೆ ಈ ಸಮಸ್ಯೆ ಇಡೀ ರಾಷ್ಟ್ರವನ್ನೇ ಕಾಡುತ್ತಾ ಇರುವಾಗ ನಾವು ಏನು ಮಾಡಂವುದ ಕ್ಕಾಗುತ್ತದೆ ಎಂಬ ನೆಪವನ್ನು ಹೇಳಿದರೇ ಹೊರತು ಕಳೆದ ೧೫ ದಿವಸಗಳಿಂದ ಏರಿದ ಬೆಲೆಯನ್ನು ಹೇಗೆ ತಡೆಗಟ್ಟಬೇಕೆಂದು ಹೇಳದೆ ಇರುವುದು ತುಂಬಾ ಶೋಚನೀಯವಾದ ವಿಚಾರ. ಕಳೆದ ೧೫ ದಿವಸಗಳಿಂದ ಅಕ್ಕಿ ಬೆಲೆಯು ೧-೭೦ ಇದ್ದದ್ದು ಇವತ್ತು ೨-೧೫ಕ್ಕೆ ಏರಿದೆ. ಗೋಧಿ ಮತ್ತು ಗೋಧಿ ಸಾಮಾನಂಗಳಾದ ರವೆ, ಮೈದಾ ಮುಂತಾದ ಪದಾರ್ಥಗಳ ಅಭಾವದಿಂದಾಗಿ ಜನರು ಕಷ್ಟಪಡುತ್ತಿದ್ದಾರೆ. ಗೋಧಿಯನ್ನು ಇನ್ನೂ ಹೆಚ್ಚಾಗಿ ತರಿಸುವುದಕ್ಕೆ ಕೇಂದ್ರದ ಮೇಲೆ ಒತ್ತಾಯ ಏಕೆ ಮಾಡಲಿಲ್ಲವೆಂದು ಕೇಳುತ್ತೇನೆ. ಮತ್ತು ಇವತ್ತು ಅಕ್ಕಿ ಬೆಲೆ ಏರೇವುದಕ್ಕೆ ಕಾರಣ ಈ ಒಂದು ಲೆವಿ ಪದ್ಧತಿ ಎಂದು ಹೇಳಬೇಕಾಗಿದೆ. ಅದಲ್ಲದೆ ಇವತ್ತು ಆಂಧ್ರದಿಂದ ಒಂದು ಲಾರಿ ಅಕ್ಕಿ ಇಲ್ಲಿಗೆ ಬರಬೇಕಾದರೆ ಅತನಂ ೪ ಸಾವಿರ ರೂಪಾಯಿ ಖರ್ಚು ಮಾಡಬೇಕಾಗುತ್ತದೆ. ಹಾಗೆ ಖರ್ಚು ಮಾಡಿದ ಹಣವನ್ನು ಇಳಿಯ ಬಳಕೆದಾರರಿಂದ ಪಡೆದುಕೊಳ್ಳುತ್ತಾರೆ.

ನ್ನೊಂದು ಕಾರಣ ಅಂತರ್ ಜಿಲ್ಲಾ ನಿರ್ಬಂದ. ಈ ನಿರ್ಬಂದವನ್ನು ತೆಗೆದು ಹಾಕಿದರೆ ಖಂಡಿತವಾಗಿಯೂ ಇಬೆಲೆ ಏರುವುದನ್ನು ತಡೆಗಟ್ಟುವುದಕ್ಕೆ ಸಾಧ್ಯವಾಗುತ್ತದೆ. ಅದರ ಬಗ್ಗೆ ಯಾವ ಕ್ರಮವನ್ನೂ ಸರ್ಕಾರ ದವರು ತೆಗೆದುಕೊಳ್ಳದೆ ಇರುವುದು ತುಂಬಾ ಶೋಚನೀಯವಾದ ವಿಚಾರ. ಹಾಗೆಯೇ ಅನೇಕ ಸಂದರ್ಭ ಗಳಲ್ಲಿ ಬೂಸ ಮತ್ತು ಹಿಂಡಿಯ ಬಗ್ಗೆಯೂ ಸರ್ಕಾರ ಬೆಲೆಯನ್ನು ಹತೋಟಿಗೆ ತರುವುದಕ್ಕೆ ನಿಸ್ಸಾಹಯಕ

(ಶ್ರೀ ಟಿ. ಆರ್. ಶಾಮಣ್ಣ)

ವಾಗಿದೆ. ಈಗ ಹಣದುಬ್ಬರ, ಬರಗಾಲ ಪರಿಸ್ಥಿತಿ-ಇತ್ಯಾದಿಗಳನ್ನು ಒಪ್ಪಿಕೊಳ್ಳೋಣ. ಆದರೂ ಸರ್ಕಾರ ಈ ರೀತಿ ಬೆಲೆ ಯದ್ವಾತದ್ವಾ ಏರುವುದನ್ನು ತಡೆಗಟ್ಟುವುದಕ್ಕೆ ಸಾಧ್ಯವಾಗಲಿಲ್ಲ. ಅದಲ್ಲದೆ ಜನರಿಗೆ ಕಾರ್ಡಿನಲ್ಲಿ ಕೊಡುತ್ತಿರುವಂತಹ ಪದಾರ್ಥಗಳನ್ನು ೫೫ ಪರ್‌ಸೆಂಟ್ ಕಡಿಮೆ ಮಾಡಿದ್ದಾರೆ. ಅಂತೂ ಸರ್ಕಾರ ಈ ಬೆಲೆಗಳನ್ನು ಏರದಂತೆ ಮಾಡಲು ಯಾವುದೇ ಒಂದು ಯೋಗ್ಯ ಕ್ರಮವನ್ನು ತೆಗೆದುಕೊಳುತ್ತಾ ಇಲ್ಲ. ನಾನು ಈ ನಿರ್ಣಯವನ್ನು ವಾಪಸ್ಸು ತೆಗೆದುಕೊಂಡರೂ ಸಹ ಕೈ ಎತ್ತುವ ಜನರು ನಿಮ್ಮ ಪಕ್ಷದಲ್ಲಿ ಇರುವಾಗ ಏನು ಮಾಡುವುದಕ್ಕೆ ಸಾಧ್ಯ. ಆದ್ದರಿಂದ ನಾನು ಈ ಸಂದರ್ಭದಲ್ಲಿ ಬೆಲೆಗಳು ಏರುತ್ತಿರುವಾಗ ಈ ನಿರ್ಣಯವನ್ನು ವಾಪಸ್ಸು ತೆಗೆದುಕೊಂಡರೆ ಜನರು ನನಗೆ ಹೇಡಿ ಎಂದು ಹೇಳುತ್ತಾರೆ. ಆದ್ದರಿಂದ ನಾನು ಸರ್ಕಾರಕ್ಕೆ ಏನಂತಿ ಮಾಡಿಕೊಳ್ಳುವುದೇನೆಂದರೆ, ಮೊದಲು ಈ ಲೆವಿ ಪದ್ಧತಿಯನ್ನು ತೆಗೆದುಹಾಕಿ; ಆ ಮೇಲೆ ಈ ಅಂತರ್ ಜಿಲ್ಲಾ ನಿರ್ಭಂದ ಏನಿದೆ, ಅದನ್ನು ಸಹ ತೆಗೆದುಹಾಕಬೇಕು. ಮತ್ತು ಗೋಧಿ ಮತ್ತು ಅದಕ್ಕೆ ಸಂಬಂಧಪಟ್ಟ ವಸ್ತುಗಳನ್ನು ಕೇಂದ್ರ ಸರ್ಕಾರದಿಂದ ತೆಗದಕೊಳ್ಳುವುದಕ್ಕೆ ಹೆಚ್ಚಿನ ಪ್ರಯತ್ನ ಮಾಡಬೇಕು. ಅದೇ ರೀತಿ ಪಡಿತರ ಕಾರ್ಡಿನಲ್ಲಿ ಸರಿಯಾಗಿ ಆಹಾರ ಪದಾರ್ಥಗಳು ಜನರಿಗೆ ಸಿಗುವ ಹಾಗೆ ಮಾಡಬೇಕು. ಇವತ್ತು ಆಹಾರ ಮಂತ್ರಿಯವರ ಪರವಾಗಿ ಚಿಕ್ಕೆಗೌಡರು ಉತ್ತರ ಕೊಡುವುದಕ್ಕೆ ಮಾತ್ರ ಬಂದಿದ್ದಾರೆ ಅಲ್ಲದೆ ಬೆಲೆ ಏರಿಕೆಯನ್ನು ತಡೆಗಟ್ಟುವುದಕ್ಕೆ ಯಾವ ಪ್ರಯತ್ನವನ್ನೂ ಮಾಡುತ್ತಿಲ್ಲ. ಕಳೆದ ವಾರ ವರ್ತಕರ ಮೇಲೆ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ಹೇಳಿದಾಗ ನೀವು ಹೇಳಿರತಕ್ಕದ್ದು ಸರಿಯಲ್ಲ ಸರ್ಕಾರ ಸರಿಯಾದ ಕ್ರಮ ತೆಗೆದುಕೊಳ್ಳುತ್ತೆವೆ ಎಂದು ಹೇಳಿದರು. ಆದರ ಇವತ್ತು ಸರ್ಕಾರದವರು ಈ ಲಾಭದ ಹಾವಳಿಯನ್ನು ತಪ್ಪಿಸಿದರೆ ಮಾತ್ರ ಯೋಗ್ಯ ಕ್ರಮ ತೆಗೆದುಕೊಳ್ಳುವುದಕ್ಕೆ ಸಾಧ್ಯವಲ್ಲವೆ ಇಲ್ಲದಿದ್ದರೆ ಸಾಧ್ಯವಿಲ್ಲವೆಂದು ಹೇಳುತ್ತೇನೆ. ಉದಾಹರಣೆಗೆ ಒಂದು ಲಾರಿ ಅಕ್ಕಿ ತರಬೇಕಾದರೆ ೪ ಸಾವಿರ ಖರ್ಚು ಮಾಡಿದಾಗ, ಅವನ್ನು ಇಲ್ಲಿ ತಂದು ಹೆಚ್ಚು ಬೆಲೆಗೆ ಮಾರಲೇ ಬೇಕಾಗಿದೆ. ಇದನ್ನು ತಪ್ಪಿಸುವುದಕ್ಕೆ ಏನು ಸರ್ಕಾರ ಮಾಡಿದೆ ಎಂದು ಕೇಳುತ್ತೇನೆ. ಈಗ ಈ ಪ್ರಶ್ನೆ ಉದ್ಭವಾಗಿರುವುದು ರಾಷ್ಟ್ರದ ಪ್ರಶ್ನೆ ಎಂಬುದಾಗಿ ಹೇಳಿದರು. ಪ್ರತಿಯೊಂದು ರಾಜ್ಯದಲ್ಲಿಯೇ ಅಲ್ಲಿ ಪ್ರತಿಯೊಂದು ದೇಶ ದಲ್ಲಿಯೂ ಈಗ ಬೆಲೆಗಳು ಏರುತ್ತಿವೆ. ನಮ್ಮ ದೇಶದಲ್ಲಿ ಒಂಬೇ ಅಲ್ಲವೆಂದು ಹೇಳಿದರು. ಆದರೆ ಆಂಧ್ರ ದಲ್ಲಿ, ತಮಿಳುನಾಡಿನಲ್ಲಿ ಅಕ್ಕಿ ಬೆಲೆ ಬಹಳ ಕಡಿಮೆ ಇರುವಾಗ ಒಂದು ಪಡಿ, ಅಂದರೆ ಒಂದೂವರೆ ಸೇರಂ ಅಕ್ಕಿಗೆ ಒಂದು ಕೆ. ಜಿ. ಎಂದು ಹೇಳಿದರೂ, ಬೆಲೆ ೧-೧೫ ಪೈಸೆ. ನಾನು ನನ್ನ ಮನೆಗೆ ಈ ಬೆಲೆಯನ್ನು ಕೊಟ್ಟು ತೆಗೆದುಕೊಂಡು ಹೋಗಿದ್ದೇನೆ ಇನ್ನು ಸಿಮೆಂಟ್ ಸರಬರಾಜಿನಲ್ಲಿ ಬೆಂಗಳೂರಿನಲ್ಲಿಯೇ ಏಕೆ ಸರ್ಕಾರದವರು ವಿಫಲರಾಗಿದ್ದಾರೆ ? ಬೆಂಗಳೂರಿನಲ್ಲಿ ೧೮ ರೂಪಾಯಿಗಳಿಗೆ ಸಿಗುತ್ತಿದೆ. ನ್ಯಾಯವಾಗಿ ಇದು ಸಿಗುವುದಕ್ಕೆ ಏಕೆ ಆಗುತ್ತಾ ಇಲ್ಲವೆಂದರೆ, ನಿಮಗೆ ಒಂದು ಸಾವಿರ ಮೂಟೆ ತೆಗೆದುಕೊಂಡು ಕೊಡುತ್ತೇನೆ ಎನ್ನೋಣ. ಅದು ನ್ಯಾಯವಾದ ಬೆಲೆಗೆ ಏಕೆ ಸಿಗುವುದಿಲ್ಲ ? ಇದರ ಬಗ್ಗೆ ಮಾನ್ಯ ಮಂತ್ರಿಗಳು ಉತ್ತರವನ್ನು ಕೊಡುವಾಗ ವಿಶದವಾಗಿ ಹೇಳಬೇಕು. ಎಷ್ಟೆಷ್ಟು ಬೇಕಾದರೂ ಸಾಮಾನುಗಳು ಸಿಗುತ್ತವೆ. ಅವು ನ್ಯಾಯವಾದ ಬೆಲೆಗೆ ಸಿಗದೇ ಇರುವಾಗ ಅದಕ್ಕೆ ಯಾರು ಕಾರಣರು ? ಹೆಚ್ಚು ಹೆಚ್ಚಾಗಿ ಜನಗಳಿಗೆ ಅನುಕೂಲ ಮಾಡಿಕೊಡಬೇಕು. ಜನಗಳ ಹಿತದೃಷ್ಟಿ ಸರ್ಕಾರದಲ್ಲಿ ಇರುವುದು ಒಳ್ಳೆಯದು. ಬಡವರಿಗೆ ಸ ರ್ಗವನ್ನೆ ತೋರಿಸುತ್ತೇನೆಂದು ಹೇಳಿದರು ಆದರೆ ಈಗ ನರಕವನ್ನೇ ತೋರಿಸುತ್ತಿದ್ದಾರೆ ನಮ್ಮಲ್ಲಿ ಅದು ಆಗುವುದಿಲ್ಲವೆಂದು ಹೇಳುವುದಿಲ್ಲ. ದಿನೇದಿನೇ ಸರ್ಕಾರದವರು ಬಹಳ ವಿಫಲರಾಗಿದ್ದಾರೆ ಬೆಲೆಗಳನ್ನು ತಗ್ಗಿಸುವುದರಲ್ಲಿ ಸರ್ಕಾರದವರು ಬಹಳ ವಿಫಲರಾಗಿದ್ದಾರೆ. ಇದನ್ನು ವಾಪಸ್ಸು ತೆಗೆದುಕೊಳ್ಳುವುದಕ್ಕೆ ಸಾಧ್ಯವಿಲ್ಲ. ಇದನ್ನು ಒಟ್ಟಿಗೆ ಹಾಕಬೇಕು.

ಶ್ರೀ ಕೆ. ಎಂ. ನಾಗಣ್ಣ :—ಮಾನ್ಯ ಶ್ರೀ ಚಿಕ್ಕೇಗೌಡರು ಬಹಳ ದೀರ್ಘವಾಗಿ ಭಾಷಣ ಮಾಡಿದ್ದಾರೆ. ಸುಮಾರು ಒಂದು ವರ್ಷದಿಂದಲೂ ಈ ಸರ್ಕಾರ ಬೆಲೆಗಳನ್ನು ತಡೆಯಲು ವಿಫಲ ರಾಗಿದ್ದಾರೆ ಈಗ ಒಂದೊಂದು ಸಾಮಾನಿನ ಬೆಲೆ ಜಾಸ್ತಿಯಾಗಿರುವುದಾಗಿದೆ. ಬೆಳೆಯುವವನಿಗೆ ಜಾಸ್ತಿ ಬೆಲೆ ಬರಲಿ ಎಂಬ ಅಭಿಪ್ರಾಯದಿಂದ ಜಾಸ್ತಿ ಮಾಡಿದ್ದಾರೆಂದು ಹೇಳುವುದು ವಾಸ್ತವವಲ್ಲ. ಎಲೆಕ್ಷನ್ನಿಗೆ ಮುಂಚೆ ಸಕ್ಕರೆ ಕಾರ್ಖಾನೆಯಿಂದ ಎಲೆಕ್ಷನ್ ಫಂಡ್ಸಿಗೆ ಅವರು ಕೊಟ್ಟಂಥ ಹಣಕ್ಕೆ ಒಂದಕ್ಕೆರಡರಷ್ಟು ಬರಲಿ ಎಂಬ ಉದ್ದೇಶದಿಂದ ಈ ರೀತಿ ಮಾಡಿದ್ದಾರೆಂದು ನಾನು ಬಹಳ ಜವಾಬ್ದಾರಿಯಿಂದ ಹೇಳ್ತಿದ್ದೆನೆ.

ಶ್ರೀ ಎಂ. ಎಸ್. ಕೃಷ್ಣನ್.—ನಿಮ್ಮವರೇ ಕಾಂಗ್ರೇಸ್ ಪಕ್ಷದವರು ಯು.ಪಿ. ವಿಧಾನಸಭೆಯಲ್ಲಿ ಈ ಬಗ್ಗೆ ಒಂದು ನಿರ್ಣಯವನ್ನು ಮಾಡಿರಲಿಲ್ಲವೇ ?

†ಶ್ರೀ ಎಸ್. ಚಿಕ್ಕೇಗೌಡ.—ಲೆವಿ ಸಕ್ಕರೆ, ಲೆವಿ ಅಲ್ಲದ ಸಕ್ಕರೆ ಬಗ್ಗೆ ಹೇಳಿದ್ದು. ಲೆವಿ ಸಕ್ಕರೆ ಬಗ್ಗೆ ನಮ್ಮ ಸರ್ಕಾರದವರು ಲೆವಿ ಮೂಲಕ ತೆಗೆದುಕೊಂಡು ಕಂಟ್ರೋಲ್ ಮಾಡಿ, ನಿಖರವಾಗಿ ಫೇರ್‌ಪ್ರೈಸ್ ಡಿಪೋಗಳನ್ನು ಮಾಡಿರುವುದು ಒಂದು. ಇನ್ನು ನಾನ್ ಲೆವಿ ಸಕ್ಕರೆಯನ್ನು ನಾನ್ ಕಂಟ್ರೋಲ್ ಮಾಡಿ ಉತ್ಪಾದಕರಿಗೆ ಬೆಲೆ ಹೆಚ್ಚಿಗೆ ಸಿಗಲಿ ಎಂಬ ಉದ್ದೇಶದಿಂದ ಮಾಡಿರುವುದು ಇನ್ನೊಂದು. ಹೀಗೆ ಕೇಂದ್ರ ಸರ್ಕಾರದ್ದು ಎರಡು ಬೆಲೆಗಳಿವೆ. ಆದ್ದರಿಂದ ಕೇಂದ್ರಸರ್ಕಾರದಿಂದ ಎಲೆಕ್ಷನ್ ಫಂಡ್ಸಿಗೆ ಹಣ ತೆಗೆದು ಕೊಂಡಿದ್ದೇವೆಂದು ಹೇಳುವುದು ನಿರಾಕರಿಸೋಣ ಹಾಗೆ ಏನಾದರೂ ತೆಗೆದುಕೊಂಡಿದ್ದರೆ ನಮ್ಮ ಮೇಲೆ ಅವರು ಚಾರ್ಜಸ್ ಮಾಡಲಿ. ಆಗ ಅಧಿಕಾರದಲ್ಲಿ ಯಾರು ಇದ್ದರೋ ಅವರೇ ತೆಗೆದುಕೊಂಡಿರುವುದೂ ಎಂಬುದಾಗಿ ಹೇಳಿದರೆ, ಇವರು ಆಗ ಏನು ಮಾಡುತ್ತಿದ್ದರು ? ಏನು ನೋಡುತ್ತಿದ್ದರು ?

Sri M. S. KRISHNA.—I want to konw what the Mysore Government stated about that particular policy of the Government of India in regard to sugar ? ೬೦ ರೂಪಾಯಿಗಳವರೆಗೆ ಸರ್ಕಾರದ ರೇಟ್ ಇದ್ದರೆ ೪೦ ರೂಪಾಯಿಗಳಂತೆ ಖಾಸಗಿಯವರಿಗೆ ಕೊಡಬೇಕೆಂದಿದೆ. ಆ ಪಾಲಿಸಿ ಸರಿಯೇ ? ವಿಚಾರದಲ್ಲಿ ಅವರು ಮೈಸೂರು ಸರ್ಕಾರಕ್ಕೆ ಏನು ಹೇಳಿದ್ದಾರೆ ಇವರು ಕೇಂದ್ರ ಸರ್ಕಾರಕ್ಕೆ ಏನು ಹೇಳಿದ್ದಾರೆ ?

MR. DEPUTY SPEAKR.—Did the hon. member participate in the discussion and put-forth that point ?

SRI M. S. KRISHNAN.—Yes, Sri. That was my main point. Unfortunately, my point has not been answered.

SRI H M. CHANNABASAPPA (Minister for Public Works and Electricity).—Sir, we have to work under the Rules of procedure. ಹೊರಗಡೆಯವರು ನಾವು ಕಾನೂನು, ರೂಲ್ಸ್ ಬಿಟ್ಟು ನಡೆದುಕೊಳ್ಳುತ್ತಿದ್ದೇವೆಂದು ತಿಳಿಯಬಾರದು. ಸರ್ಕಾರದ ಒಂದು ನೀತಿಯ ಬಗ್ಗೆ ನಾವು ಹೇಳುತ್ತಿದ್ದರೂ ಬ್ಲಾಕ್ ಮಾರ್ಕೆಟ್ಟಿಗೆ ಬೇಕಾದಷ್ಟು ಅವಕಾಶಗನ್ನು ಮಾಡಿಕೊಂಡಿದ್ದಾರೆ.

ಶ್ರೀ ಎಂ. ಎಸ್. ಕೃಷ್ಣನ್.—ಈ ಕಡೆ ಇರುವಾಗ ಮಾನ್ಯ ಮಂತ್ರಿಗಳು ಏನೂ ರೂಲ್ಸ್ ವಿಷಯ ಹೇಳುತ್ತೀರಲ್ಲ.

ಶ್ರೀ ಎಚ್. ಎಂ. ಚನ್ನಬಸಪ್ಪ.—ನಾನು ಈ ಕಡೆ ಇರಲಿ. ಆ ಕಡೆ ಇರಲಿ, ರೂಲ್ಸ್‌ಗೆ ತಲೆ ಬಾಗತಕ್ಕವನು ನಾನು, ನೀವಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಶ್ರೀ ಕೆಂಗಲ್ ಹನುಮಂತಯ್ಯನವರು ಹಿಂದೆ ಒಂದು ಮಾತನ್ನು ಹೇಳಿದ್ದಾರೆ. ಅದು ಬಹಳ ಪ್ರಾಮುಖ್ಯವಾದ ವಿಷಯ. ಅದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಕೆ. ಎಂ. ನಾಗಣ್ಣ.—ನಾನು ಡಿವಿಷನ್ನಿಗೆ ಪ್ರೆಸ್ ಮಾಡುತ್ತೇನೆ.

ಶ್ರೀ ಮಾಟಾಳ್ ನಾಗರಾಜ್.—ನಿಮ್ಮ ಭಂಡ ಸಮಾಜವಾದಕ್ಕೆ ಧಿಕ್ಕಾರ, ನಿಮ್ಮ ಬೆಲೆ ಏರಿಕೆಗೆ ಧಿಕ್ಕಾರ, ನಿಮ್ಮ ಬ್ಲಾಕ್ ಮಾರ್ಕೆಟ್ಟಿಗೆ ಧಿಕ್ಕಾರ.

MR. DEPUTY SPEAKER.—I will put the Resolution to the vote of the House.

The question is :—

"That this Assembly recommends to Government to take immediate steps to arrest the spiralling prices of essential commodities in the State."

The House divided.

MR. DEPUTY SPEAKER.—The result of the division is : Ayes...21; Noes ..43. The "Noes" have it.

The motion was negatived and the Resolution was lost

(Sri KAGODU THIMMAPPA AND Sri K. LINGAPPA WERE STANDIG.)

MR. DEPUTY SPEAKER.—What is Sri Kagodu Thimmappa going ? I can understand The vehemence but it must also have its own limitation. No useful purpose would be served by using strong words and the members object will not be served. He cannot carry the point farther. The Upanisheds are written in the softest possible language and that is why they have stood the test of time for 5000 years because of their weight and the great philosophy. Let him not be under an impression that he can achieve his object by using strong words. If another member from the opposite side stands up and uses a similar language, then it would te difficult for me to control the House. In democracy we must adjust ourselves. We must have a sense of proportion.

ಶ್ರೀ ಎಂ. ಎಸ್. ಕೃಷ್ಣನ್.—ನಮ್ಮ ಕಡೆಯಲ್ಲಿ ಶ್ರೀ ವಾಟಾಳರು ಬ್ಲ್ಯಾಕ್‌ಮಾರ್ಕೆಟ್ ಮಾಡತಕ್ಕ ವರಿಗೆ ಉತ್ತೇಜನ ಕೊಡತಕ್ಕ ಸರ್ಕಾರಕ್ಕೆ ಧಿಕ್ಕಾರ ಎಂದರೆ—ಅತ್ತಕಡೆ ಪಕ್ಷದಲ್ಲಿರತಕ್ಕ ಮಾನ್ಯ ಗುಂಡೂ ರಾವ್ ಅವರು ಬ್ಲಾಕ್ ಮಾರ್ಕೆಟ್ ಮಾಡದೆ ಇರತಕ್ಕ ವರ್ತಕರಿಗೆ ಧಿಕ್ಕಾರ ಎಂದು ಕೂಗುತ್ತಿದ್ದಾರಲ್ಲಾ ? ಅದು ಆಗಬಹುದೇ.....

ಶ್ರೀ ಕಾಗೂಡು ತಿಮ್ಮಪ್ಪ.—ನಾನು ಒಂದು ಪ್ರಿವಿಲೇಜ್ ಮೋಷನ್ನನ್ನು ಕಳುಹಿಸಿದ್ದೆ...

MR. DEPUTY SPEAKER.—There would be an occasion to raise it but we are in the midst of other business. Now I am calling upon the Hon. member Sri K. Sriramulu to offer his remarks.

SRI VATAL NAGARAJ.—Stood up and persisted in interrupting the speach of sri Sriramalu.

MR. DEPUTY SPEAKER —Hon. member may please resume his seat. As soon as hon. member Sri Sriramulu completes his observation, I will put the resolution to the vote of the House. If he withdraws it, it is well and good. While we are in the midst of a particular subject, it would create a very bad precedent if we allow something else in the middle. Let the hon. member Sri Sriramulu commence his remarks.

ಶ್ರೀ ಕೆ. ಶ್ರೀರಾಮುಲು (ಗಾಂಧಿನಗರ).—ಮಾನ್ಯ ಉಪ ಸಭಾಪತಿಯವರೇ : ನಿರ್ಣಯವನು ವಾಪಸ್ ತೆಗೆದುಕೊಳ್ಳಬೇಕೆಂದರೆ ಸಾಮಾನ್ಯವಾಗಿ ಮನಸ್ಸಿಗೆ ಬಹಳ ನೋವಾಗುತ್ತದೆ. ಆದರೆ ನಾನು ಸರ್ಕಾರಕ್ಕೆ ಸಾಧ್ಯವಾಗತಕ್ಕ ನಾಲ್ಕೈದು ಸಲಹೆಗಳನ್ನು ಸೂಚಿಸುತ್ತೇನೆ. ಆದರ ಬಗ್ಗೆ ಅವರು ಏನು ಉತ್ತರ ಕೊಡುತ್ತಾರೆಂಬುದನ್ನು ನೋಡಿ ಮುಂದಿನ ವಿಷಯ ತೀರ್ಮಾನ ಮಾಡಬೇಕಾಗಿದೆ.

(೮) ಸರ್ಕಾರದವರು ತಮ್ಮ ಇರತಕ್ಕ ಕಾನೂನಿನ ಚೌಕಟ್ಟಿನಲ್ಲೇ ಎಲ್ಲಾ ರೇಷನ್ ಅಂಗಡಿಗಳಿಗೂ ಒಂದೇ ರೀತಿಯಲ್ಲಿ ರೇಷನ್ ಕಾರ್ಡುಗಳನ್ನು ಅಸೈನ್‌ಮಾಡಬೇಕು. ಒಬ ರಿಗೆ ಹೆಚ್ಚು ಇನ್ನೊಬ ರಿಗೆ ಕಡಮೆ ಪ್ರಮಾಣದಲ್ಲಿ ಅಸೈನ್ ಮಾಡಬಾರದು. ಇದರಿಂದ ಲಂಚ ಕಡಮೆ ಆಗುವುದಕ್ಕೆ ಅವಕಾಶವಿದೆ. (೨) ಇನ್ನು ಯಾವ ಒಂದು ಫೈರ್ ಪ್ರೈಜ್ ಡಿಪೋದಲ್ಲೂ ಜನರ ನಿತ್ಯ ಬಳಕೆಗೆ ಬೇಕಾಗುವಂತ ವಸ್ತುಗಳ ದಾಸ್ತಾನು ೧೦ ದಿನಗಳಿಗೆ ಮೀರಿದಂತೆ ಸರಬರಾಯಿ ಮಾಡಬೇಕು. ಇದನ್ನು ಜಾರಿಗೆ ತಂದರೆ ಲಂಚಕ್ಕೆ ಅವಕಾಶ ಇರುವುದಿಲ್ಲ ; ಬ್ಲಾಕ್ ಮಾರ್ಕೆಟ್ಟಾಗುವುದಕ್ಕೂ ಅವಕಾಶ ಇರುವುದಿಲ್ಲ. (೩) ಸಾಲಿ ಎಷ್ಟು ಯೂನಿಟ್ ಆಹಾರ ಧಾನ್ಯಗಳನ್ನು ಕೊಡಲಾಗುತ್ತಿದೆಯೋ ಅದನ್ನು ಜಾಸ್ತಿ ಮಾಡಬೇಕೆಂದು ಹೇಳುವುದರ ಜೊತೆಗೆ ಹಾಲಿ ಯಾವ ಯಾವ ಕಾರ್ಡಿನಲ್ಲಿ ಏನೇನು ಧಾನ್ಯಗಳನ್ನು ಕಡ್ಡಾಯವಾಗಿ ಆ ಜನರಿಗೆ ದೊರೆ ಯುತ್ತಿದಕ್ಕೆ ಅವಕಾಶ ಮಾಡಿಕೊಡಬೇಕು. ಅಂಗಡಿಯವರು ದಾಸ್ತಾನಿಲ್ಲ—ನಾಳೆ ಬಾ ; ನಾಡಿದ್ದು ಬಾ ; ಅಂದಾಗ ಅಂಗಡಿಯವನು ಆರೀತಿ ಬರೆದುಕೊಡುವಂತೆ ಸರ್ಕಾರದವರು ಅಂಗಡಿಯವರಿಗೆ ಕಡ್ಡಾಯ ಮಾಡಬೇಕು. ಆ ಧಾನ್ಯ ಅನ್ಯರೀತಿಯಲ್ಲಿ ಬ್ಲಾಕ್ ಮಾರ್ಕೆಟ್ ಆಗುವುದಕ್ಕೆ ಅವಕಾಶ ಇಲ್ಲದಂತೆ ಜನರಿಗೇ ಮಂಟ್ಟುವಂತೆ ಮಾಡಬೇಕು. ಇಷ್ಟಕ್ಕೆ ಸರ್ಕಾರ ಒಪ್ಪಿಕೊಂಡರೆ ನಾನು ನನ್ನ ನಿರ್ಣಯವನ್ನು ವಾಪಸ್ ತೆಗೆದುಕೊಳ್ಳಲು ಅಭ್ಯಂತರವೇನೂ ಇರುವುದಿಲ್ಲ.

†ಶ್ರೀ ಎಲ್ ಚಿಕ್ಕೇಗೌಡ.—ಸರ್ಕಾರದವರು ಬೋಗಸ್ ಕಾರ್ಡುಗಳನ್ನು ಕಂಡುಹಿಡಿಯುವುದಕ್ಕೆ ಈಗಾಗಲೇ ಸೂಕ್ತ ಕಾರ್ಯಕ್ರಮಗಳನ್ನು ಕೈ ಗೊಂಡಿರತಕ್ಕ ವಿಷಯವನ್ನಾಗಲೀ ನಾನು ಸಭೆಗೆ ವಿವರಿಸಿ ದ್ದೇನೆ. ಇನ್ನು ಮಾನ್ಯ ಸದಸ್ಯರು ಸೂಚಿಸಿರತಕ್ಕ ವಿಷಯ ಪ್ರತಿ ಅಂಗಡಿಗೂ ಅಸೈನ್ ಮಾಡತಕ್ಕ ರೇಷನ್ ಕಾರ್ಡುಗಳು ಒಂದೇ ದಾಮೋಷದಲ್ಲಿರಬೇಕೆಂದೂ ಮತ್ತು ಅಂಗಡಿಗಳಲ್ಲಿ ಜನರಿಗೆ ಮಾರಾಟ ಮಾಡಲು ಇಡತಕ್ಕ ವಸ್ತುಗಳು ೧೦ ದಿನಕ್ಕೆ ಮೀರಿ ದಾಸ್ತಾನು ಇರುವುದಕ್ಕೆ ಅವಕಾಶವಿಲ್ಲದಂತೆ ಸಾಮಾನು ಗಳನ್ನು ಅಂಗಡಿಗಳಿಗೆ ಸರಬರಾಯಿ ಮಾಡಬೇಕೆಂದೂ ತಿಳಿಸಿದ್ದಾರೆ. ಸರ್ಕಾರದವರು ವಿಚಾರದಲ್ಲಿ ಸೂಕ್ತ ಕ್ರಮ ಕೈ ಗೊಳ್ಳುತ್ತಾರೆ. ಇನ್ನು ರೇಷನ್ ಕಾರ್ಡುಗಳಲ್ಲಿ ಬರೆದಿರತಕ್ಕ ಆಹಾರ ಧಾನ್ಯಗಳನ್ನು ಕಾರ್ಡು ಹೋಲ್ಡರುಗಳು ತಮ್ಮ ಅನಾನುಕೂಲದ ದೆಸೆಯಿಂದ ಆ ತಿಂಗಳಲ್ಲೇ ಅದನ್ನು ಕೊಳ್ಳುವುದಕ್ಕೆ ಸಾಧ್ಯವಾಗ ದಿದ್ದರೂ ಅವರಿಗೆ ಆ ಸಾಮಗ್ರಿಗಳು ಮುಂದಿನ ತಿಂಗಳಲ್ಲೂ ಕೂಡ ಸಿಕ್ಕುವಂತೆ ಮಾಡುವುದಕ್ಕೆ ಒಂದು ಅವಕಾಶ ಕಲಿಸಬೇಕೆಂದಿದ್ದೇವೆ.

ಇನ್ನು ಕಡೆಯದಾಗಿ ನನಗೆ ಸಂಬಂಧ ಪಟ್ಟಹಾಗೆ ಹೆಸರುಘಟ್ಟ ಫಾರಂ ವಿಷಯ ಅಲ್ಲಿರತಕ್ಕ ಫಾರಂ ನಲ್ಲಿ ಮೊಟ್ಟೆಗಳನ್ನು ಪಾಂಡುರಂಗಸೆಟ್ಟಿ ಅನ್ನತಕ್ಕವರಿಗೆ ೧೫ ಪೈಸೆಗೆ ಕೊಟ್ಟಿದ್ದನ್ನು ಅವರು ಜನರಿಗೆ ೨೫ ಪೈಸೆಗಳಿಂದ ೩೦ ಪೈಸೆಗಳವರೆಗೂ ಮಾರಾಟ ಮಾಡಿಕೊಳ್ಳುತ್ತಿದ್ದಾರೆಂದು ಹೇಳಿದರು. ಅದರ ಬಗ್ಗೆ ಒಂದು ಮಾತನ್ನು ಹೇಳಬೇಕಾಗಿದೆ. ಅಲ್ಲಿ ಮೈಸೂರು ಪಾಲ್ಟ್ರಿ ಫಾರ್ಮರ್ಸ್ ಅಸೋಸಿಯೇಷನ್ ಎಂಬ ಸಂಸ್ಥೆ ಇದೆ. ಅಲ್ಲಿ ಅವರು ಈ ಮೊಟ್ಟೆಗಳನ್ನು ೨೦ ಪೈಸೆಗಳಿಂದ ೨೪ ಪೈಸೆಗಳವರೆಗೂ ಮಾರಾಟ ಮಾಡುತ್ತಿದ್ದಾರೆ.....

ನಾವು ೧೫ ಪೈಸೆಗೆ ಕೊಟ್ಟರೆ ಅದಕ್ಕೆ ಸೇಲ್ಸ್‌ಟ್ಯಾಕ್ಸ್ ಸೇರಿಸಿ ೨೫ ರಿಂದ ೨೮ ಪೈಸೆಯವರೆಗೆ ಛಾರ್ಜ ಮಾಡುವರು. ನಮ್ಮ ಜಾಯಿಂಟ್ ಡೈರಕ್ಟರೂ ಸಹ ಬೋರ್ಡಿನಲ್ಲಿದ್ದಾರೆ. ಇಷ್ಟೆಲ್ಲಾ ಭರವಸೆ ಕೊಟ್ಟ ಮೇಲೆ ಮಾನ್ಯ ಸದಸ್ಯರು ತಮ್ಮ ನಿರ್ಣಯವನ್ನು ವಾಪಸ್ಸು ಪಡೆಯಬೇಕೆಂದು ಪ್ರಾರ್ಥನೆ ಮಾಡಿ ಕೊಳ್ಳುತ್ತೇನೆ.

11-00 A.M.

ಶ್ರೀ ಕೆ. ಶ್ರೀರಾಮುಲು.—ನಾನು ಇದನ್ನು ವಾಪಸ್ ಪಡೆಯುವುದಾಗಿ ಆಗಲೇ ಹೇಳಿದ್ದೇನೆ.

MR. DEPUTY SPEAKER.—Is it the pleasure of the House that leave be granted to member to withdraw the Resolution ?

Hon. Members.—Yes

The resolution was by leave withdrawan.